ಗುಲ್ಬರ್ಗಾ ಜಿಲ್ಲೆಯಲ್ಲಿರುವ ತೊಗರಿ ಬೀಜದ ಅಭಾವದ ಬಗ್ಗೆ

18(301) ಡಾ:ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ)
ಶ್ರೀ ಎಸ್.ವಿ. ರವೀಂದ್ರನಾಥ್ (ಕೃಷಿ ಸಚಿವರು)

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ತೊಗರಿ ಬೀಜದ ಕೊರತೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಆ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಜಿಲ್ಲೆಗೆ, ಬಿತ್ತನೆ ಬೀಜಗಳನ್ನು, ಸರ್ಕಾರಿ ಸ್ವಾಮ್ಯದ ಮತ್ತು ಖಾಸಗಿ ವಲಯದ ಸಂಸ್ಥೆಗಳ ಮುಖಾಂತರ ದೊರಕಿಸಲು ಕ್ರಮ ಕೈಗೊಂಡಿದೆ. ರೈತರಿಗೆ ರಿಯಾಯಿತಿ ದರದಲ್ಲಿ ಬೀಜ ಒದಗಿಸಲು ಸಹ ಕ್ರಮ ಕೈಗೊಳ್ಳಲಾಗಿರುತ್ತದೆ. ಅಲ್ಲದೆ, ರೈತರ ಬಳಿ ದೊರಕಬಹುದಾದ ಗುಣಮಟ್ಟದ ಬಿತ್ತನೆ ಬೀಜಗಳನ್ನು ಗುರುತಿಸಿ ವಿತರಿಸಲು ವ್ಯವಸ್ಥೆ ಮಾಡಲಾಗಿದೆ.

ಗುಲ್ಬರ್ಗಾ ಜಿಲ್ಲೆಯಲ್ಲಿ 2006–07ನೇ ಸಾಲಿನಲ್ಲಿ ಅತಿ ಹೆಚ್ಚು 1883.77 ಕ್ವಿಂ. ಮತ್ತು ಕಡಿಮೆ 962.78 ಕ್ವಿಂ ಬೀಜ 2007–08 ನೇ ಸಾಲಿನಲ್ಲಿ ವಿತರಿಸಲಾಗಿರುತ್ತದೆ. ಇದರ ಆಧಾರದ ಮೇರೆಗೆ, 2009ರ ಮುಂಗಾರು ಹಂಗಾಮಿಗೆ 1625ಕ್ವಿಂ.ಬೀಜ ವಿತರಿಸಲು ಗುರಿ ಹೊಂದಲಾಗಿತ್ತು. ಅದಕ್ಕನುಸಾರವಾಗಿ ಗುಲ್ಬರ್ಗಾ ಜಿಲ್ಲೆಯಲ್ಲಿ ಪ್ರಸ್ತುತ ಮುಂಗಾರು ಹಂಗಾಮಿನಲ್ಲಿ 1605.00 ಕ್ವಿಂ ಈಗಾಗಲೇ ರೈತರಿಗೆ ವಿತರಿಸಲಾಗಿರುತ್ತದೆ. ಹಾಲಿ 230 ಕ್ವಿಂ. ತೊಗರಿ ಬೀಜ ಲಭ್ಯವಿರುತ್ತದೆ.

ಡಾ:ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಸಚಿವರು ಉತ್ತರಿಸಿದ್ದಾರೆ. ತಾವು ಬೇಕಾದರೆ ನೋಡಬಹುದು. ಗುಲ್ಬರ್ಗಾ ಜಿಲ್ಲೆಯಲ್ಲಿ ತೊಗರಿ ಬೀಜದ ಕೊರತೆ ಇದೆಯೆ ಎಂದರೆ ಹೌದು ಎಂದು ಉತ್ತರಿಸಿದ್ದಾರೆ. ಇದಕ್ಕೆ ಪರಿಹಾರ ಏನು ಹುಡುಕುತ್ತೀರಿ ಎಂದರೆ ಅವರ ಹತ್ತಿರ ಪರಿಹಾರವಿಲ್ಲ. ಪರಿಹಾರ ಏನು ಹೇಳುತ್ತಿದ್ದಾರೆಂದರೆ, ರೈತರಿಗೆ ಎಲ್ಲಿ ಬೀಜ ಇದೆ ಅಲ್ಲಿ ಐಡೆಂಟಿಫೈ ಮಾಡುತ್ತಿದ್ದೇವೆ. ನಂತರ ಹಿಂದಿನ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. 2006–07 ನೇ ಸಾಲಿನಿಂದಲೂ ಪ್ರತಿ ವರ್ಷ 1600, 1700, 1800 ಕ್ವಿಂಟಾಲ್ ಕೊಟ್ಟಿದ್ದೇವೆ, ಹೀಗಾಗಿ ಈ ವರ್ಷವೂ 1600 ಕ್ವಿಂಟಾಲ್ ಕೊಟ್ಟಿದ್ದೇವೆ. 230 ಕ್ವಿಂಟಾಲ್ ತೊಗರಿ ಬೀಜ ಲಭ್ಯವಿರುತ್ತದೆಂದು ಹೇಳಿದ್ದಾರೆ. ಇದು ಸತ್ಯಕ್ಕೆ ದೂರ. ಅಲ್ಲಿ ಒಂದು ಕಾಳು ಬೀಜ ಇಲ್ಲ. ರೈತರು ಆ ಕೇಂದ್ರಗಳಿಗೆ ಹೋಗಿ ಅಲೆದಾಡುತ್ತಿದ್ದಾರೆ ಅಲ್ಲಿ ಯಾವುದೇ ಬೀಜ ಇಲ್ಲ. ನಿಮಗೆ ತಪ್ಪು ಮಾಹಿತಿ ಇದೆ. ಗುಲ್ಬರ್ಗಾ ಜಿಲ್ಲೆಯಲ್ಲಿ 3 ಲಕ್ಷ 30 ಸಾವಿರ ಹೆಕ್ಟೇರ್ ಭೂಮಿಗೆ ಮುಂಗಾರಿನಲ್ಲಿ ತೊಗರಿ ಬಿತ್ತನೆಯಾಗುತ್ತದೆ. ಇದರಲ್ಲಿ 50% ಅಂದರೆ 1 ಲಕ್ಷ 50 ಸಾವಿರ ಹೆಕ್ಟೇರ್ ಮಾತ್ರ ಬಿತ್ತನೆಯಾಗಿದೆ. ಇನ್ನೂ ಬಿತ್ತನೆ ಆಗಬೇಕಾದರೆ ಸುಮಾರು

ಕ್ವಿಂಟಾಲ್ ಬೀಜ ಬೇಕಾಗುತ್ತದೆ. ಕೃಷಿ ಇಲಾಖೆಯಲ್ಲಿ ವೈಜ್ಞಾನಿಕವಾಗಿ ಎಷ್ಟು ಬೀಜ ಬೇಕಾಗುತ್ತದೆ? ಎಷ್ಟು ಬಿತ್ತನೆಯಾಗುತ್ತದೆ? ಎಂದು ಅಸೆಸ್‌ಮೆಂಟ್ ಮಾಡಿಲ್ಲ. ಒಂದು ವೇಳೆ 3 ಲಕ್ಷ 30 ಸಾವಿರ ಹೆಕ್ಟೇರ್ಸ್ ಬಿತ್ತನೆಯಾಗಬೇಕಾದರೆ ಸುಮಾರು 25,000 ಕ್ವಿಂಟಾಲ್ ಬೀಜ ಬೇಕು. ಇಷ್ಟು ಪ್ರಮಾಣದ ಬೀಜ ನೀವು ವ್ಯವಸ್ಥೆ ಮಾಡದೇ ಇದ್ದರೂ standard practices ಎಲ್ಲಿದೆ ಎಂದರೆ ನಿವು 30% ಬೀಜ ಕೊಡಬೇಕು. 70% ರೈತ ತನ್ನಲ್ಲಿ ಇರತಕ್ಕಂಥ ಬೀಜದಿಂದಲೇ ತಾನು ಬಿತ್ತನೆ ಮಾಡಿಕೊಳ್ಳುತ್ತಾನೆ. ನೀವು 25,000 ಕ್ವಿಂಟಾಲ್‌ನಲ್ಲಿ 30% ಎಂದರೆ ಸುಮಾರು 7–8 ಸಾವಿರ ಕ್ವಿಂಟಾಲ್ ಬೀಜದ ವ್ಯವಸ್ಥೆ ಮಾಡಬೇಕಾಗಿತ್ತು. ಆದರೆ ನೀವು 1600 ಕ್ವಿಂಟಾಲ್ ಇಟ್ಟು ಹೆಚ್ಚಿಗೆ ಕೊಡುವುದಕ್ಕೆ ಆಗುವುದಿಲ್ಲವೆಂದರೆ ರೈತರು ಈಗ ಏನು ಮಾಡಬೇಕು? ರೈತರ ಹತ್ತಿರ ಬೀಜ ಇಲ್ಲ. ಇನ್ನೂ 1 ಲಕ್ಷ 50 ಸಾವಿರ ಹೆಕ್ಟೇರ್ ಬಿತ್ತನೆಯಾಗಬೇಕಾಗಿದೆ. ಇದು ಬಹಳ ಗಂಭೀರವಾಗಿರುವುದರಿಂದ ನಾನು ಈ ಮಾತನ್ನು ಹೇಳಬೇಕಾಗುತ್ತದೆ. ನಾನು ಏಕೆ ಹೇಳುತ್ತೇನೆಂದರೆ, ಇಲಾಖೆಯಲ್ಲಿ ಮಾನ್ಯ ಮಂತ್ರಿಗಳು ಜಾಗ್ರತೆಯಿಂದ ಕೆಲಸ ಮಾಡಬೇಕಾಗುತ್ತದೆ. ಈಗ ರೈತ ಸಂಕಷ್ಟದಲ್ಲಿದ್ದಾನೆ. ನೀವು ಮೂರುವರೆ ಲಕ್ಷ ಹೆಕ್ಟೇರ್‌ಗೆ ತೊಗರಿ ಬಿತ್ತನೆ ಮಾಡಬೇಕಾದರೆ ಬೀಜ ಎಷ್ಟು ಬೇಕೆಂದು ನಿಮ್ಮ ಅಸೆಸ್‌ಮೆಂಟ್ ಇಲ್ಲ. ನಿಮ್ಮ ಇಲಾಖೆಯವರು ಫ್ರೀ ಪ್ಲಾನ್ ಮಾಡುವುದಿಲ್ಲ. ಹಿಂದಿನಿಂದಲೂ ಹೀಗೆ ನಡೆದುಕೊಂಡು ಬಂದಿದೆ ಎಂದರೆ ಹಿಂದೆ lacuna ಆಗಿದೆ. ಅದಕ್ಕೆ ನಮ್ಮ ಇಳುವರಿ ಕಡಿಮೆಯಾಗುತ್ತದೆ. ನಿಮ್ಮ ಹತ್ತಿರ ಈಗ ಏನೂ ವಿಕಲ್ಪ ಇಲ್ಲ. ನಮಗೆ ಇನ್ನೂ ಸುಮಾರು 2 ಸಾವರ ಕ್ವಿಂಟಾಲ್ ಬೀಜ ಬೇಕು. ಬೀಜ ಅವರ ಹತ್ತಿರ ಇಲ್ಲ. ಈಗ ಏನು ಮಾಡುತ್ತಾರೆ? ರೈತರು ಅಲ್ಲಿ ಕಷ್ಟದಲ್ಲಿದ್ದಾರೆ ಇದಕ್ಕೆ ಮಾನ್ಯ ಸಚಿವರು ಏನು ಮಾಡುತ್ತಾರೆಂದು ಹೇಳಬೇಕಾಗುತ್ತದೆ.

ಶ್ರೀ ಎಸ್.ಎ.ರವಿಂದ್ರನಾಥ್: ಮಾನ್ಯ ಅಧ್ಯಕ್ಷರೆ, ನಾವು ಹಿಂದಿನ ಮೂರು ವರ್ಷದಲ್ಲಿ ಎಷ್ಟೆಷ್ಟು ಖರ್ಚು ಆಗಿದೆ ಎಂಬುದನ್ನು ನೋಡಿ ನಾವು ಬೀಜ ಸಂಗ್ರಹಣೆ ಮಾಡುತ್ತೇವೆ. ಅಂಕಿ ಸಂಖ್ಯೆಗಳನ್ನು ಹೇಳುವುದಾದರೆ, 2006–07ರಲ್ಲಿ 1883.77 ಕ್ವಿಂಟಾಲ್‌ನಷ್ಟು ಖರ್ಚು ಆಗಿತ್ತು. 2007–08 ರಲ್ಲಿ 967.78 ಕ್ವಿಂಟಾಲ್‌ನಷ್ಟು ಖರ್ಚು ಆಗಿತ್ತು ಇದರ ಆಧಾರದ ಮೇಲೆ 2008–09 ರಲ್ಲಿ 1625 ಕ್ವಿಂಟಾಲ್‌ನಷ್ಟು ಬೀಜ ಅವಶ್ಯಕತೆ ಇದೆ ಎಂದು ಅಂದಾಜು ಮಾಡಿದ್ದು ಅದರಂತೆ 1605 ಕ್ವಿಂಟಾಲ್ ಬೀಜವನ್ನು ಈಗಾಗಲೇ ವಿತರಣೆ ಮಾಡಲಾಗಿದೆ. ಇನ್ನೂ ನಮ್ಮಲ್ಲಿ 230 ಕ್ವಿಂಟಾಲ್ ಬೀಜ ಇದೆ. ಹೀಗಾಗಿ ಅವರು ಯಾವ ಭಾಗಕ್ಕೆ ಬೀಜ ಬೇಕೆಂದು ಹೇಳುತ್ತಾರೆ ಅಲ್ಲಿಗೆ ಕೊಡುವಂಥ ವ್ಯವಸ್ಥೆ ಮಾಡುತ್ತೇವೆ.

ಡಾ:ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ನೀವು ಬೀಜ ಇಲ್ಲವೆಂದು ಹೇಳುತ್ತೀರಿ. ಜನರು ನಿರೀಕ್ಷೆ ಮಾಡುತ್ತಿದ್ದಾರೆ. ಹೀಗಾಗಿ ತಾವು ಸ್ಪಷ್ಟವಾಗಿ ಉತ್ತರ ಹೇಳಬೇಕಾಗುತ್ತದೆ. ಅಲ್ಲಿ ಬೀಜದ ಕೊರತೆ ಇದೆ. ಅಲ್ಲಿ ಯಾವ ಬೀಜ ಲಭ್ಯವಿಲ್ಲ. ಇನ್ನು ಮಳೆ ಸಮರ್ಪಕವಾಗಿಲ್ಲ, ನಮ್ಮ ಭಾಗದಲ್ಲಿ ಇನ್ನೂ 50% ಮಳೆ ಆಗಿಲ್ಲ.

ಅಧ್ಯಕ್ಷರು:– ಇನ್ನೂ ಹೆಚ್ಚಿನ ಬೀಜ ವಿತರಣೆ ಮಾಡಬೇಕೆಂದು ಅವರು ಸಲಹೆ ಕೊಟ್ಟಿದ್ದಾರೆ. ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆಂದು ಹೇಳಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:– ಎಲ್ಲಿಂದ ತಂದು ಮಾಡುತ್ತಾರೆಂಬುದನ್ನು ನಮಗೆ ಹೇಳಬೇಕು.

ಶ್ರೀ ಟಿ.ಬಿ.ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ತೊಗರಿ ಬೆಳೆಯನ್ನು ಹೆಚ್ಚಾಗಿ ಬೆಳೆಯಕ್ಕಂಥ ಗುಲ್ಬರ್ಗಾ ಜಿಲ್ಲೆಯಲ್ಲಿಯೇ ಬೀಜ ಸಿಗುತ್ತಿಲ್ಲವೆಂದರೆ, ಇನ್ನು ನಮ್ಮ ಕತೆ ಏನೆಂಬುದರ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ನನ್ನ ಕ್ಷೇತ್ರದಲ್ಲಿ ಕೇವಲ 10–15 ಕ್ವಿಂಟಾಲ್ ಬೀಜ ಕೊಡಿಸುವುದಕ್ಕೆ ಮಾತ್ರ ಸಾಧ್ಯವಾಗಿದೆ. ತೊಗರಿ ಬೀಜಕ್ಕೆ ಇವತ್ತು ಬೇಡಿಕೆ ಇದೆ. ಕಾರಣವೇನೆಂದರೆ, ಇವತ್ತಿನ ದಿವಸ ಮಳೆಯಲ್ಲಿ ವ್ಯತ್ಯಾಸವಾಗಿರುವುದರಿಂದ ಎಲ್ಲಾ ರೈತರು ತೊಗರಿ ಬೆಳೆಯುವುದಕ್ಕೆ ಹೋಗುತ್ತಿದ್ದಾರೆ. ಆದ್ದರಿಂದ, ನನ್ನ ಒಂದು ಸಲಹೆ ಏನೆಂದರೆ, ಸೀಡ್ಸ್ ಕಾರ್ಪೋರೇಷನ್ ಮೂಲಕ ನಿಮಗೆ ಸರ್ಟಿಫೈಡ್ ಸೀಡ್ಸ್ ಸಿಗದೆ ಇರಬಹುದು, ಆದರೆ, ರೈತರ ಹತ್ತಿರ ಇರತಕ್ಕಂಥ ಟ್ರೂತ್‌ಫುಲ್ ಸೀಡ್ಸ್ ನಿಮಗೆ ಸಿಗುತ್ತದೆ. ಇದನ್ನಾದರು ತೆಗೆದುಕೊಂಡು ಹೋಗಿ ಕೊಡಿಸಿ. ಇವತ್ತಿನ ದಿವಸ ಎಲ್ಲಿಯೂ ಕೂಡ ಬೀಜ ಸಿಗುತ್ತಿಲ್ಲ.

ಡಾ:ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:– ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಬೀಜದ ಲಭ್ಯತೆ ಎಲ್ಲಿಯೂ ಎಲ್ಲ. ಸರ್ಟಿಫೈಡ್ ಸೀಡ್ಸ್ ಕೂಡ ಯಾರ ಹತ್ತಿರ ಇಲ್ಲ. ಆದರೆ, ರೈತರ ಹತ್ತಿರ ಟ್ರೂತ್‌ಫುಲ್ ಸೀಡ್ಸ್ ಇದ್ದರೆ ಅದನ್ನು ಪತ್ತೆ ಹಚ್ಚಿ ಕೊಡಿಸುತ್ತೇವೆಂದು ಹೇಳಿದ್ದಾರೆ. KSSC is the only agency which is supplying seeds. KSSC ರವರು 1600 ಕ್ವಿಂಟಾಲ್ ಟಾರ್ಗೆಟ್ ಇಟ್ಟುಕೊಂಡಿದ್ದರು. ಆದರೆ, ಟಾರ್ಗೆಟ್ ನಿಗದಿ ಮಾಡುವಾಗ ಇದರ ಬಗ್ಗೆ ಗಮನ ಕೊಡಬೇಕಾಗುತ್ತದೆ. ಏಕೆಂದರೆ, ಮುಂದಿನ ವರ್ಷ ಕೂಡ ಇದೇ ಸಮಸ್ಯೆ ಬರಬಹುದು. ಆದ್ದರಿಂದ, ಮುಂದಿನ ವರ್ಷಕ್ಕೆ ಕೊನೇಪಕ್ಷ 6 ಸಾವಿರ ಕ್ವಿಂಟಾಲ್‌ನಷ್ಟು ಟಾರ್ಗೆಟ್ ಇಟ್ಟುಕೊಳ್ಳುವುದಕ್ಕೆ ನಿಮಗೆ ಏನು ಸಮಸ್ಯೆ ಇದೆ ಎಂದು ಹೇಳಬೇಕು? ಮೂರು ವರ್ಷಗಳಿಂದ ಏನು ಕೊಟ್ಟಿದ್ದಾರೆಯೋ ಅದರ ಆಧಾರದ ಮೇಲೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. 3 ವರ್ಷಗಳಲ್ಲಿ ಏಕೆ ಕಡಿಮೆ ಹೋಗಿದೆ ಎಂದರೆ, ರೈತರ ಹತ್ತಿರ ಬೀಜ ಇತ್ತು. ನೀವು ಸಬ್ಸಿಡಿ ಕೊಡುತ್ತಿದ್ದೀರಿ. ಸಬ್ಸಿಡಿ ಮತ್ತು ಮಾರ್ಕೆಟ್ ರೇಟ್ ಒಂದೇ ಇತ್ತು. ಆದ್ದರಿಂದ ರೈತರ್ಯಾರೂ ನಿಮ್ಮ ಹತ್ತಿರ ಬೀಜವನ್ನು ತೆಗೆದುಕೊಂಡಿಲ್ಲ. ಆದರೆ, ಈಗ ಸಬ್ಸಿಡಿಗೂ ಮತ್ತು ಮಾರುಕಟ್ಟೆಯಲ್ಲಿನ ರೇಟ್‌ಗೆ ಬಹಳಷ್ಟು ವ್ಯತ್ಯಾಸ ಇದೆ. ಆದ್ದರಿಂದ, ಮಾನ್ಯ ಸಚಿವರು ಇದಕ್ಕೆ ನಿರ್ದಿಷ್ಟವಾದ ಉತ್ತರ ಕೊಡಬೇಕಾಗುತ್ತದೆ. ಈ ಸಾರಿ ಇನ್ನೂ ಎರಡು ಸಾವಿರ ಕ್ವಿಂಟಾಲ್‌ನ್ನು ಎಲ್ಲಿಂದ ತಂದು ಕೊಡುತ್ತೀರಿ ಎಂಬ ಬಗ್ಗೆ ಕೂಡ ಹೇಳಬೇಕು. ಮುಂದಿನ ವರ್ಷಕ್ಕೆ ಕೆಎಸ್‌ಎಸ್‌ಸಿ ಮೂಲಕ ಬೀಜವನ್ನು ಉತ್ಪಾದನೆ

ಮಾಡುವುದಕ್ಕೆ ನಿಮ್ಮ ಟಾರ್ಗೆಟ್‌ನ್ನು ಜಾಸ್ತಿ ಮಾಡುತ್ತೀರಾ? ಈ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು.

ಶ್ರೀ ಎಸ್.ಎ.ರವೀಂದ್ರನಾಥ್:– ಮಾನ್ಯ ಅಧ್ಯಕ್ಷರೆ, ಫೌಂಡೇಷನ್ಸ್ ಸೀಡ್ಸ್ ಅಥವಾ ಸರ್ಟಿಫೈಡ್ ಸೀಡ್ಸ್ ಎಷ್ಟು ಅವಶ್ಯಕತೆ ಇದೆಯೋ ಅಷ್ಟು ತಯಾರು ಮಾಡತಕ್ಕಂಥ ಕೆಲಸವನ್ನು ಈ ಸಾರಿ ಮಾಡುತ್ತೇವೆ. ಈಗ ಟ್ರುತ್‌ಫುಲ್ ಲೇಬಲ್‌ನ ಸೀಡ್ಸ್ ಸಂಗ್ರಹಣೆ ಮಾಡಿ ವಿತರಣೆ ಮಾಡುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ. ಆಂಧ್ರಪ್ರದೇಶ ಅಥವಾ ಇತರೆ ರಾಜ್ಯಗಳಿಂದ ತರಿಸಿ ಕೊಡುತ್ತೇವೆ.

ಅಧ್ಯಕ್ಷರು:– ಮುಂದಿನ ಪ್ರಶ್ನೆ ಮಾನ್ಯ ಕರಡಿ ಸಂಗಣ್ಣ ಅಮರಪ್ಪನವರದು. ಆದರೆ, ತೋಟಗಾರಿಕೆ ಇಲಾಖೆ ಮಂತ್ರಿಗಳು ಬಂದಿದ್ದಾರೆಯೇ? ಮಾನ್ಯ ಸುರೇಶ್ ಕುಮಾರ್‌ರವರೆ, ತೋಟಗಾರಿಕೆ ಇಲಾಖೆ ಮಂತ್ರಿಗಳು ಇಲ್ಲಿ ಕಾಣುತ್ತಿಲ್ಲ.

ಶ್ರೀ ಎಸ್.ಸುರೇಶ್ ಕುಮಾರ್:– ಬರುತ್ತಾರೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ:– ಕಾನೂನು ಮಂತ್ರಿಗಳಿಗೆ ಅವರು ಏನಾದರು ಹೇಳಿದ್ದಾರೆಯೇ?

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ಅವರಿಗೆ ಸಂಬಂಧಪಟ್ಟಂಥ ಇಲಾಖೆಯ ಬಗ್ಗೆ ಪ್ರಶ್ನೆ ಬಂದಾಗ ಇಲಾಖೆಯ ಮಂತ್ರಿಗಳು ಇಲ್ಲವೆಂದರೆ ಇವರು ಎಷ್ಟು ಜವಾಬ್ದಾರಿಯಿಂದ ಕೆಲಸ ಮಾಡುತ್ತಿದ್ದಾರೆಂಬುದನ್ನು ತಾವು ಗಮನಿಸಬೇಕು. ಇವತ್ತು ಪ್ರಶ್ನೆ ಇರುವುದನ್ನು ಅವರು ನೋಡಿರುತ್ತಾರೆ. ಆದ್ದರಿಂದ, ಸಂಬಂಧಪಟ್ಟಂಥ ಮಂತ್ರಿಗಳು ಇಲ್ಲಿ ಬಂದು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲವೇ?

ಶ್ರೀ ಎಸ್.ಸುರೇಶ್ ಕುಮಾರ್:– ಖಂಡಿತ ಬರುತ್ತಾರೆ. ಆ ನಂತರ ಸದರಿ ಪ್ರಶ್ನೆಯನ್ನು ತೆಗೆದುಕೊಳ್ಳಿ.

ಶ್ರೀ ಸಿದ್ದರಾಮಯ್ಯ:– ಆಮೇಲೆ ತೆಗೆದುಕೊಳ್ಳುವುದು ಬೇರೆ.

ಶ್ರೀ ಎಸ್.ಸುರೇಶ್ ಕುಮಾರ್:– ಇವತ್ತೇ ತೆಗೆದುಕೊಳ್ಳಲಿ.

ಶ್ರೀ ಸಿದ್ದರಾಮಯ್ಯ:– ಇವತ್ತು ಅಥವಾ ನಾಳೆ ದಿವಸ ತೆಗೆದುಕೊಳ್ಳಲಿ. ಅದರ ಬಗ್ಗೆ ನಾನು ಹೇಳುತ್ತಿಲ್ಲ. ಆದರೆ, ನನ್ನ ಸಲಹೆ ಏನೆಂದರೆ, ಆಯಾಯ ಇಲಾಖೆಯ ಪ್ರಶ್ನೆಗಳಿರುವಾಗ ಸಂಬಂಧಪಟ್ಟಂಥ ಮಂತ್ರಿಗಳು ಇಲ್ಲಿರಬೇಕೆಂದು ತಾವು ಹೇಳಬೇಕು. ಸದಸ್ಯರು ಪ್ರಶ್ನೆ ಬಂದಾಗ ಉತ್ತರ ಪಡೆದುಕೊಳ್ಳುವುದಕ್ಕೆ ಇಲ್ಲಿ ಕಾಯುತ್ತಾ ಕುಳಿತುಕೊಂಡಿರುತ್ತಾರೆ. ಆದ್ದರಿಂದ, ಮಂತ್ರಿಗಳು ಇಲ್ಲಿ ಹಾಜರಿರಬೇಕು.

ಶ್ರೀ ಎಸ್.ಸುರೇಶ್ ಕುಮಾರ್:– ಮಾನ್ಯ ಮಂತ್ರಿಗಳು ಬರುತ್ತಿದ್ದಾರೆ

ಶ್ರೀ ಸಿದ್ದರಾಮಯ್ಯ:– ಅಧಿವೇಶನ ಪ್ರಾರಂಭವಾಗಿ ಎರಡನೇ ದಿವಸವೇ ಅವರು ಬಂದಿಲ್ಲ.

ಶ್ರೀ ಎಸ್.ಸುರೇಶ್ ಕುಮಾರ್:– ಮೊದಲನೇ ದಿವಸ ಏನಾಯಿತ್ತೆಂದು ಇಡೀ ರಾಜ್ಯಕ್ಕೆ ಗೊತ್ತಾಗಿದೆ.

ಶ್ರೀ ಸಿದ್ದರಾಮಯ್ಯ:- No, no, this is not correct. Question hour ಇದೆ ಎಂದು ಅಜೆಂಡಾದಲ್ಲಿದೆ. ಮೊದಲನೇ ದಿನ ಮತ್ತು ಎರಡನೇ ದಿನ ಬೇರೆ ಇರುತ್ತದೆ. ಮಾನ್ಯ ಅಧ್ಯಕ್ಷರೇ, ತಾವು ಅವರಿಗೆ ಸ್ವಲ್ಪ ಸ್ಟ್ರೀಕ್ಟ್ ಆಗಿ ಹೇಳಬೆಕು.

ಅಧ್ಯಕ್ಷರು:- ಮಾನ್ಯ ಮಂತ್ರಿಗಳು ತಡವಾಗಿ ಬರುತ್ತಾರೆಂದು ಹೇಳುತ್ತಿದ್ದಾರೆ. ಅವರು ಏತಕ್ಕೆ ತಡವಾಗಿ ಬರುತ್ತಾರೆಂದು ಅವರು ಪ್ರಶ್ನೆ ಕೇಳಿದರೆ ನಾವು ಉತ್ತರ ಹೇಳುತ್ತೇವೆ. ಏಕೆಂದರೆ, ಹಿಂದೆ ಹೇಳಿರತಕ್ಕಂಥದ್ದನ್ನು ಇನ್ನು ಮಾಡುವುದಕ್ಕೆ ಅವರಿಂದ ಆಗಿಲ್ಲ. ಆದ್ದರಿಂದ, ಅವರು ಬರುತ್ತಿಲ್ಲವಷ್ಟೆ.

ಅಧ್ಯಕ್ಷರು:- ಮಾನ್ಯ ಕರಡಿ ಸಂಗಣ್ಣ ಅಮರಪ್ಪನವರೆ ನಿಮ್ಮ ಪ್ರಶ್ನೆಗೆ ಇವತ್ತೇ ಉತ್ತರ ಕೊಡಿಸುತ್ತೇನೆ. ಮುಂದಿನ ಪ್ರಶ್ನೆ ಮಾನ್ಯ ಕೆ.ಜಿ.ಕುಮಾರಸ್ವಾಮಿಯವರದು ಇದೆ. ಆದರೆ, ಅವರು ಬಂದಿಲ್ಲ. ಮುಂದಿನ ಪ್ರಶ್ನೆ ಮಾನ್ಯ ಎಸ್.ಆರ್.ಮಹೇಶ್‌ರವರದು.

ರಾಜ್ಯದಲ್ಲಿ ರೈತರಿಗೆ ವಿತರಿಸುವ ಬಿತ್ತನೆ ಬೀಜ ಕುರಿತು

21(305) ಶ್ರೀ ಮಹೇಶ್ ಎಸ್.ಆರ್ (ಕೃಷ್ಣರಾಜನಗರ)
ಶ್ರೀ ಎಸ್.ಎ. ರವಿಂದ್ರನಾಥ್ (ಕೃಷಿ ಸಚಿವರು)

ಅ) ರಾಜ್ಯದಲ್ಲಿ ರೈತರಿಗೆ ವಿತರಿಸಲಾಗುತ್ತಿರುವ ಬಿತ್ತನೆ ಬೀಜಗಳ ತಳಿಗಳಾವುವು. ಈ ಬಿತ್ತನೆ ಬೀಜಗಳಲ್ಲಿ ಪೇಟೆಂಟ್ ಪಡೆದ ಬೀಜಗಳ ತಳಿಗಳೆಷ್ಟು;

ರಾಜ್ಯದಲ್ಲಿ ರೈತರಿಗೆ ವಿತರಿಸಲಾಗುತ್ತಿರುವ ಬಿತ್ತನೆ ಬೀಜಗಳ ತಳಿಗಳ ಪಟ್ಟಿಯನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಪೇಟೆಂಟ್ ಪಡೆದ ಬೀಜಗಳಿರುವುದಿಲ್ಲ.

ಆ) ಬಿತ್ತನೆ ಬೀಜಗಳನ್ನು ರೈತರಿಗೆ ವಿತರಿಸಲಾಗುವ ಸಂಸ್ಥೆಗಳಾವುವು; ಆ ಪೈಕಿ ನೊಂದಾಯಿತ ಮತ್ತು ನೊಂದಾಯೇತರ ಸಂಸ್ಥೆಗಳು ಎಷ್ಟು;

ಬಿತ್ತನೆ ಬೀಜ ವಿತರಿಸುವ ಸಂಸ್ಥೆಗಳ ಪಟ್ಟಿಯನ್ನು ಅನುಬಂಧ–2ರಲ್ಲಿ ನೀಡಲಾಗಿದೆ. ಸಂಸ್ಥೆಗಳ ನೊಂದಾವಣೆ ವ್ಯವಸ್ಥೆ ಇರುವುದಿಲ್ಲ.

ಇ) ರೈತರಿಗೆ ಕಳಪೆ ಬಿತ್ತನೆ ಬೀಜ ಸರಬರಾಜು ಮಾಡಿದ ಸಂಸ್ಥೆಗಳು ಯಾವುವು (ವಿವರ ನೀಡುವುದು);

ಇಲ್ಲ.

ಈ) ರೈತರಿಗೆ ಕಳಪೆ ಬಿತ್ತನೆ ಬೀಜ ವಿತರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;